Reliance
Industries Limited

**ಮೋಸದ ಕುರಿತು ಎಚ್ಚರಿಕೆ!**

ಕಾರ್ಪೊರೇಟ್ ನೇಮಕಾತಿ ಮೋಸಗಳು ಇತ್ತೀಚಿನ ದಿನಗಳಲ್ಲಿ ವ್ಯಾಪಕವಾಗಿ ನಡೆಯುತ್ತಿವೆ. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಅದರ ಸಮೂಹ ಕಂಪನಿಗಳು ಗಮನಿಸಿರುವುದೇನೆಂದರೆ, ಕೆಲವು ಮೋಸಗಾರರು ಅಮಾಯಕ ಉದ್ಯೋಗ ಆಕಾಂಕ್ಷಿಗಳನ್ನು ಸಂಪರ್ಕಿಸಿ, ನಮ್ಮ ಸಮೂಹ ಕಂಪನಿಗಳಲ್ಲಿ ಆಕರ್ಷಕ ಉದ್ಯೋಗ ಅವಕಾಶಗಳ ಭರವಸೆ ನೀಡುತ್ತಿದ್ದಾರೆ. ಉದ್ಯೋಗ ಆಕಾಂಕ್ಷಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಮೋಸಗಾರರು, ಅಪಾಯಿಂಟ್‌ಮೆಂಟ್ ಅಥವಾ ಸಂದರ್ಶನಕ್ಕಾಗಿ ನಿರ್ದಿಷ್ಟ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡುವಂತೆ ಕೋರುತ್ತಾರೆ.

- **ಈ ಮೋಸದ ಪ್ರಕ್ರಿಯೆ ಹೀಗಿದೆ:** ಮೊದಲು ಹಣದ ಬೇಡಿಕೆ ಸಾಮಾನ್ಯವಾಗಿ ಸಣ್ಣ ಮೊತ್ತದಲ್ಲಿರುತ್ತದೆ. ಇದರಿಂದ ಉದ್ಯೋಗ ಆಕಾಂಕ್ಷಿಗೆ ಅನುಮಾನ ಬರುವುದಿಲ್ಲ ಮತ್ತು ಅವರು ಲಘುವಾಗಿ ಪರಿಗಣಿಸುತ್ತಾರೆ.
- ಸಂತ್ರಸ್ತರು ಪ್ರತಿಕ್ರಿಯೆ ನೀಡಿದಾಗ, ನಿಗದಿತ ಸಂದರ್ಶನ ಅಥವಾ ಅಪಾಯಿಂಟ್‌ಮೆಂಟ್ ದಿನಾಂಕ ಹತ್ತಿರ ಬರುತ್ತಿದ್ದಂತೆ **ಮೋಸಗಾರರು ನಿಧಾನವಾಗಿ ಹಣವನ್ನು ಹೆಚ್ಚಿಸುತ್ತಾರೆ**.
- ಲ್ಯಾಪ್‌ಟಾಪ್‌ನಂತಹ ಆರಂಭಿಕ **ಸ್ಟಾರ್ಟಪ್ ಕಿಟ್ ನೀಡುತ್ತೇವೆ ಎಂದು ಭಾರಿ ಮೊತ್ತದ ಹಣವನ್ನು** ಕೆಲವು ಬಾರಿ ಆಗ್ರಹಿಸಲಾಗುತ್ತದೆ
- **ಲ್ಯಾಪ್‌ಟಾಪ್‌ನಂತಹ ಆರಂಭಿಕ ಸ್ಟಾರ್ಟಪ್ ಕಿಟ್ ಒದಗಿಸುತ್ತೇವೆ ಎಂಬ ನೆವದಲ್ಲಿ** ದೊಡ್ಡ ಮೊತ್ತದ ಹಣಕ್ಕೆ ಬೇಡಿಕೆ ಇಡುವ ಪ್ರವೃತ್ತಿಯೂ ಕಂಡುಬಂದಿದೆ.
- ಹಣದ ಜೊತೆಗೆ ಅರ್ಜಿ ಪ್ರಕ್ರಿಯೆಗೊಳಿಸಲು ವೈಯಕ್ತಿಕ ಮಾಹಿತಿಯನ್ನೂ ಈ ಮೋಸಗಾರರು ಪಡೆಯುತ್ತಿರುವುದು ವರದಿಯಾಗಿದೆ. ಈ ಡೇಟಾವನ್ನು ನಂತರ ಮಾರ್ಕೆಟ್‌ನಲ್ಲಿ ಮಾರಾಟ ಮಾಡಲಾಗುತ್ತದೆ.

ಈ ಮೋಸದ ಎಚ್ಚರಿಕೆಯ ಮೂಲಕ ಎಲ್ಲ ಉದ್ಯೋಗ ಆಕಾಂಕ್ಷಿಗಳಿಗೆ ನಾವು ಎಚ್ಚರಿಕೆ ನೀಡಲು ಬಯಸುವುದೇನೆಂದರೆ, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಅದರ ಸಮೂಹ ಕಂಪನಿಗಳು:

- **ಉದ್ಯೋಗ ಒದಗಿಸಲು ಮತ್ತು ಸಂದರ್ಶನ ನೀಡಲು ಅಥವಾ ಲ್ಯಾಪ್‌ಟಾಪ್, ಸಮವಸ್ತ್ರವನ್ನು ಒದಗಿಸಲು, ಸೆಕ್ಯುರಿಟಿ ಡೆಪಾಸಿಟ್ ಅಥವಾ ಕೋವಿಡ್ ಟೆಸ್ಟ್‌ಗಳನ್ನು ನಡೆಸಲು ಹಣ ಅಥವಾ ಲೇವಣಿಯನ್ನು ಯಾವುದೇ ಉದ್ಯೋಗ ಆಕಾಂಕ್ಷಿಯಿಂದ ಪಡೆಯುವುದಿಲ್ಲ.**
- **ಉದ್ಯೋಗ ಪ್ರಸ್ತಾವನೆ ಮಾಡಲು ಅಥವಾ ವಿತರಿಸಲು ಅಥವಾ ತನ್ನ ಪರವಾಗಿ ಪ್ರಯೋಜನಗಳನ್ನು ಒದಗಿಸಲು ಯಾವುದೇ ಏಜೆಂಟ್, ಏಜೆನ್ಸಿ ಅಥವಾ ವ್ಯಕ್ತಿಯನ್ನು ನೇಮಿಸಿಲ್ಲ.**
- **ಮಾರ್ಕ್‌ಶೀಟ್‌ಗಳು, ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್, ಸ್ವವಿವರದಂತಹ ವೈಯಕ್ತಿಕ ಮಾಹಿತಿಯನ್ನು ವಾಟ್ಸ್‌ಆಪ್ ಮೂಲಕ ಹಂಚಿಕೊಳ್ಳುವಂತೆ ಅಥವಾ ಆನ್‌ಲೈನ್ ಫಾರ್ಮ್‌ಗಳನ್ನು ಭರ್ತಿ ಮಾಡುವಂತೆ ಕೇಳುವುದಿಲ್ಲ.**

- **ವೈಯಕ್ತಿಕ ಇಮೇಲ್ ಐಡಿಗಳಾದ ಜಿಮೇಲ್, ಯಾಹೂ, ಹಾಟ್‌ಮೇಲ್, ಔಟ್‌ಲುಕ್ ಇತ್ಯಾದಿ ಬಳಸಿ ಸಂವಹನ ನಡೆಸುವುದಿಲ್ಲ. ಉದ್ಯೋಗಕ್ಕೆ ಸಂಬಂಧಿಸಿದ ಎಲ್ಲ ಅಧಿಕೃತ ಸಂವಹನಗಳನ್ನು "@ril.com, @jiobp.com" ಇಂದ ಕೊನೆಗೊಳ್ಳುವ ಇಮೇಲ್ ವಿಳಾಸವನ್ನು ಬಳಸಿ ನಡೆಸಲಾಗುತ್ತದೆ.**
- **ಎಸ್‌ಎಂಎಸ್‌ಗಳನ್ನು ಕಳುಹಿಸುವಂತೆ ಕೇಳಿ ಯಾವುದೇ ಉದ್ಯೋಗವನ್ನೂ ಒದಗಿಸುವುದಿಲ್ಲ.**

ಇಂತಹ ಏಜೆನ್ಸಿ, ಉದ್ಯೋಗ ಪೋರ್ಟಲ್ ಅಥವಾ ವ್ಯಕ್ತಿಯೊಂದಿಗೆ ವ್ಯವಹರಿಸುತ್ತಿರುವ ಯಾವುದೇ ಉದ್ಯೋಗ ಆಕಾಂಕ್ಷಿಯು ತನ್ನ ಸ್ವಂತ ರಿಸ್ಕ್‌ನಿಂದ ವ್ಯವಹರಿಸಬೇಕು ಮತ್ತು ಈ ಪ್ರಕ್ರಿಯೆಯಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಉಂಟಾಗುವ ಯಾವುದೇ ಹಾನಿಗಳಿಗೆ ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಅದರ ಸಮೂಹ ಕಂಪನಿಗಳು ಜವಾಬ್ದಾರರಾಗುವುದಿಲ್ಲ.

ಉದ್ಯೋಗಾಕಾಂಕ್ಷಿಗಳು ರಿಲಾಯನ್ಸ್ ಇಂಡಸ್ಟ್ರೀಸ್ ಲಿ. ರಿಟೇಲ್ ಅಥವಾ ಜಿಯೋದ ಅಧಿಕೃತ ವೆಬ್‌ಸೈಟ್ ಮೂಲಕ ತಮ್ಮ ಆಫರ್ ಲೆಟರ್‌ನ ಅಸಲಿಯತ್ತನ್ನು ಪರಿಶೀಲಿಸಿಕೊಳ್ಳಬಹುದು.

ಮೋಸದ ಉದ್ಯೋಗಕ್ಕೆ ಸಂಬಂಧಿಸಿದ ಯಾವುದೇ ಅನುಮಾನಾಸ್ಪದ ಚಟುವಟಿಕೆ ಕಂಡುಬಂದಲ್ಲಿ, ನಮ್ಮ ಹಿತಾಸಕ್ತಿಗೆ ಸಂಬಂಧಿಸಿದಂತೆ ನಮ್ಮ ಮೋಸ ಮತ್ತು ದುರ್ವರ್ತನೆ ತನಿಖೆಗಳ ಮುಖ್ಯಸ್ಥರಿಗೆ recruitment.fraud@ril.com ಇಲ್ಲಿ ವರದಿ ಮಾಡಬೇಕು.